# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ , ಬಿ. ಹೆಚ್. ರಸ್ತೆ , ತುಮಕೂರು - 572 103

ಸಂಖ್ಯೆ:ತುವಿ:ಅವಿ:2026-27/1140 ದಿನಾಂಕ:30.06.2026

## : ಬಿಡುಗಡೆ ಆದೇಶ :

**ವಿಷಯ: 2025-26 ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪದವಿಯ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಕುರಿತು.**

**ಉಲ್ಲೇಖ:** 1. ವಿ.ವಿ. ಪರಿಷ್ಕೃತ ಅಧಿಸೂಚನೆ ಸಂಖ್ಯೆ:ತುವಿ:ಶೈವಿ:PG:2025-26/2976 ದಿನಾಂಕ:23.12.2025

2. ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ:12.06.2026 (ಕಂಡಿಕೆ–101)

* * * * *

2025-26 ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲಾಗಿತ್ತು. ವಿಶ್ವವಿದ್ಯಾನಿಲಯದ ಉಲ್ಲೇಖ(1) ರ ಪರಿಷ್ಕೃತ ಅಧಿಸೂಚನೆಯನ್ವಯ ಸ್ನಾತಕೋತ್ತರ ಪದವಿ ತರಗತಿಗಳು ದಿನಾಂಕ:30.06.2026 ರಂದು ಮುಕ್ತಾಯಗೊಳ್ಳಲಿವೆ.

ಈ ಸಂಬಂಧ ಎಲ್.ಎಲ್.ಎಂ., ಎಂ.ಬಿ.ಎ., ಎಂ.ಬಿ.ಎ.(ಫೈನಾನ್ಸ್) ಮತ್ತು ಎಂ.ಸಿ.ಎ. ವಿಭಾಗಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸ್ನಾತಕೋತ್ತರ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳನ್ನು **ದಿನಾಂಕ:30.06.2026 ರ ಮಂಗಳವಾರ ಅಪರಾಹ್ನದಂದು ಅನ್ವಯವಾಗುವಂತೆ** ಕರ್ತವ್ಯದಿಂದ ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಮುಂದುವರೆದು, ಅತಿಥಿ ಉಪನ್ಯಾಸಕರುಗಳು ಅಧ್ಯಕ್ಷರು/ಸಂಯೋಜಕರುಗಳ ಮುಖಾಂತರ ಗ್ರಂಥಾಲಯ ಬೇಬಾಕಿ ಪ್ರಮಾಣ ಪತ್ರದೊಂದಿಗೆ ಲಿಖಿತ ಮನವಿ ಸಲ್ಲಿಸಿ **ದಿನಾಂಕ:10.07.2026 ರೊಳಗಾಗಿ** ವಿಶ್ವವಿದ್ಯಾನಿಲಯದ ಕಚೇರಿಯಿಂದ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಹಿಂಪಡೆಯುವಂತೆ ತಿಳಿಸಲಾಗಿದೆ.

**ಆದೇಶದ ಮೇರೆಗೆ**

**ಉಪಕುಲಸಚಿವರು**

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಕರಡು ಪ್ರತಿ ಮಾನ್ಯ ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ.**

**ಗೆ,**

1. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಂಯೋಜಕರು, ಜ್ಞಾನಸಿರಿ ಕ್ಯಾಂಪಸ್, ತುಮಕೂರು ವಿಶ್ವವಿದ್ಯಾನಿಲಯ, ಬಿದರೆಕಟ್ಟೆ.
3. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ಜ್ಞಾನಸಿರಿ ಕ್ಯಾಂಪಸ್, ತುಮಕೂರು ವಿಶ್ವವಿದ್ಯಾನಿಲಯ, ಬಿದರೆಕಟ್ಟೆ,

4. ಸಂಯೋಜಕರು, ತಿಪಟೂರು ಸ್ನಾತಕೋತ್ತರ ಕೇಂದ್ರ, ತಿಪಟೂರು.
5. ಸಂಯೋಜಕರು, ಶಿರಾ ಸ್ನಾತಕೋತ್ತರ ಕೇಂದ್ರ, ಭುವನಹಳ್ಳಿ, ಶಿರಾ.
6. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.
7. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು.

ಪ್ರತಿಗಳು :

1. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. – **ಇಂದೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.**
5. ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅತಿಥಿ ಉಪನ್ಯಾಸಕರುಗಳು.
6. ಕಚೇರಿ ಪ್ರತಿ.